O.S.374/2013 DW-1

ದಿನಾಂಕಃ 12.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**<u>ಪಾಟೀ ಸವಾಲುಃವಾದಿ ಪರ ವಕೀಲರಿಂದಃ</u>**

ಯದುನಂದನ ರವರು ನನ್ನ ಸಂಬಂಧಿಕರು ಎಂದರೆ ಸರಿಯಲ್ಲ. ಅವರು ನನಗೆ ಸುಮಾರ 50 ವರ್ಷಗಳಿಂದ ಪರಿಚಯವಿರುತ್ತಾರೆ. ಯದುನಂದನ ರವರು 10-12 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ಅವರು ಮೃತಪಟ್ಟಾಗ ಅವರ ವಯಸ್ಸು ಸುಮಾರು 48 ವರ್ಷ ಆಗಿರುತ್ತದೆ. ನಾನು ದಾವಾ ಸ್ವತ್ತಿನ ಕ್ರಯ ಪತ್ರವನ್ನು ನೋಡಿರುತ್ತೇನೆ. ನನಗೆ ಪುಟ್ಟೇಗೌಡರು ದಾವಾ ಸ್ವತ್ತನ್ನು ಪ್ರತಿವಾದಿಯು ಕ್ರಯಕ್ಕೆ ಪಡೆದುಕೊಂಡಿರುವ ವಿಚಾರವನ್ನು ತಿಳಿಸಿರುತ್ತಾರೆ. ಯಾವ ವರ್ಷದಲ್ಲಿ ಎಷ್ಟು ಬೆಲೆಗೆ ಕ್ರಯವಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯು ಖಾಲಿ ಜಾಗ ಆಗಿರುತ್ತದೆ. ಸಾಕ್ಷಿಯು ಮುಂದುವರೆದು ಶೆಡ್ ಇರುತ್ತದೆ ಎಂದು ನುಡಿದಿರುತ್ತಾರೆ. ಸದರಿ ಶೆಡ್ ಗೆ ವಿದ್ಯುತ್ ಸಂಚಾರ ಮತ್ತು ಗ್ಯಾಸ್ ಸೌಲಭ್ಯಗಳು ಇರುವುದಿಲ್ಲ. ಸಾಕ್ಷಿಯು ಮುಂದುವರೆದು ಸೌದೆಯ ಒಲೆಯನ್ನು ಇಟ್ಟುಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ನಾನು ಜಾಜಿ ಕಟ್ಟೆಯಲ್ಲಿ ವಾಸವಿರುವ ವಿಚಾರವನ್ನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಸಿರುವುದಿಲ್ಲ ಎಂದರೆ ಸರಿ. ದಾವಾ ಸ್ವತ್ತಿನ ಸೈಟ್ ನಂ.39 ಎಂದು ನನಗೆ ಪುಟ್ಟೆಗೌಡ ರವರು ತಿಳಿಸಿರುತ್ತಾರೆ. ಪ್ರತಿವಾದಿಯ ಮರಣದ 10-15 ವರ್ಷಗಳ ಹಿಂದೆ ಪುಟ್ಟೇಗೌಡ ರವರು ಮೃತಪಟ್ಟಿರುತ್ತಾರೆ. ನನ್ನ ಮನೆಯ ಖಾನೇಶುಮಾರಿ ನಂ. ನನಗೆ ಗೊತ್ತಿಲ್ಲ. ಯಾರ ಹೆಸರಿಗೆ ಕ್ರಯ ಪತ್ರ ಇರುತ್ತದೆ ಎಂದರೆ ಸಾಕ್ಷಿಯು ಪುಟ್ಟೇಗೌಡರು ತಮ್ಮ ಹೆಂಡತಿಯ ಹೆಸರಿಗೆ ಪಡೆದುಕೊಂಡಿರುವುದಾಗಿ ತಿಳಿಸಿದರು ಎಂದು ನುಡಿದಿರುತ್ತಾರೆ. ಸೈಟ್ ನಂ.39 ಅನ್ನು ಯಾವ ಸರ್ವೆ ನಂ. ರಲ್ಲಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ದಾವಾ ಸ್ವತ್ತಿನ ಚೆಕ್ಕು ಬಂಧಿ ಹಾಗೂ ವಿಸ್ತೀರ್ಣ ನನಗೆ ಗೊತ್ತಿಲ್ಲ. ದಾವಾ ಸ್ವತ್ತನ್ನು ನಾನು ನೋಡಿಲ್ಲ ಎಂದರೆ ಸರಿಯಲ್ಲ. ಲಲಿತಮ್ಮ ರವರು ಹೊನ್ನವಳ್ಳಿಯಲ್ಲಿ ವಾಸವಿದ್ದಾರೆ. ಯದುನಂದನ ರವರ ತಾಯಿ ಮೃತಪಟ್ಟಿರುತ್ತಾರೆ. ಸೈಟ್ ನಂ.39 ರಲ್ಲಿ ಇರುವ ಶೆಡ್ ಅನ್ನು ಬಾಡಿಗೆಗೆ ಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ವಿಚಾರವಾಗಿ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಸಿರುವುದಿಲ್ಲ ಎಂದರೆ ಸರಿ. ಸದರಿ ದಾವೆಯ ವಾದಿಯು ನನಗೆ ಸುಮಾರು 50 ವರ್ಷದಿಂದ ಪರಿಚಯವಿರುತ್ತಾರೆ. ಸೈಟ್ ನಂ.3 ರನ್ನು ವಾದಿಯು ಕ್ರಯಕ್ಕೆ ಪಡೆದುಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಸೈಟ್ ನ ಚೆಕ್ಕು ಬಂಧಿ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿ. ಸೈಟ್ ನಂ.3 ರಿಂದ ಸೈಟ್ ನಂ.39 ಎಷ್ಟು ದೂರದಲ್ಲಿ ಇರುತ್ತದೆ ಎಂದು ನನಗೆ ಗೊತ್ತಿಲ್ಲ.

ನನಗೆ ದಾವಾ ಆಸ್ತಿಯ ಬಗ್ಗೆ ಯಾವುದೇ ವಿಚಾರ ಗೊತ್ತಿಲ್ಲ ಎಂದರೆ ಸರಿಯಲ್ಲ. ಸೈಟ್ ನಂ.3 ರನ್ನು ಶಕುನಯ್ಯರವರು ಕ್ರಯಕ್ಕೆ ಪಡೆದಾಗಿನಿಂದಲೂ ಅವರೇ ಸ್ವಾಧೀನದಲ್ಲಿ ಇದ್ದರು ಎಂದರೆ ನನಗೆ ಗೊತ್ತಿಲ್ಲ. ಈ ಹಿಂದೆ ಪ್ರತಿವಾದಿಯು ಹೂಡಿದ ದಾವೆಯು ವಜಾ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಂತರ ದಾವಾ ಸ್ವತ್ತಿನಲ್ಲಿ ಶೆಡ್ ಅನ್ನು ಕಟ್ಟಿದ್ದಾರೆ ಎಂದರೆ ಸರಿ. ವಾದಿಯ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸದರಿ ಶೆಡ್ ಅನ್ನು ಹಾಕಿದ್ದರೆ ಎಂದರೆ ಸರಿಯಲ್ಲ. ಮೊದಲಿನಿಂದಲೂ ನಾವು ಮತ್ತು ಲಲಿತಮ್ಮರವರು ಅನ್ಯೋನ್ಯವಾಗಿದ್ದೇವೆ ಎಂದರೆ ಸರಿ. ಆದಕಾರಣ ನಾನು ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಶಿರಾ.